# ಕನಕದಾಸರ ಜಯಂತಿ



ದಿನಾಂಕ 30- 11- 2023ರಂದು ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿ ದಾಸವರೇಣ್ಯ ಕನಕದಾಸರ ಜಯಂತಿಯನ್ನು ವಿ ಜೃಂಬಣೆಯಿಂದ ಆಚರಿಸಲಾಯಿತು. ಕನಕದಾಸರ ತತ್ವ ಮತ್ತು ಚಿಂತನೆಗಳ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಅವರಿಗೆ ಭಾಷಣ, ಪ್ರಭಂದ ಹಾಗೂ ಹಾಡಿನ ಸ್ಪರ್ದೆ ಏರ್ಪಡಿಸಲಾಗಿತ್ತು. ಹಾಗೂ ವಿಜೇತರಿಗೆ ಈ ಸಮಾರಂಭದಲ್ಲಿ ಬಹುಮಾನ ವಿತರಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಎಂ.ಎಸ್. ಸಾಳುಂಕೆ ಅವರು ಮಾತನಾಡಿ  ಜಾತಿ ಮತಗಳನ್ನು ಮೀರಿದ ಕನಕದಾಸ ತಮ್ಮ ಪದಗಳ ಮೂಲಕ ಸಮಾಜದ ಓರೆ ಕೊರೆಗಳನ್ನು ತಿದ್ದಲು ಪ್ರಯತ್ನಿಸಿದ ಮಹಾನ್ ದಾರ್ಶನಿಕ  ಎಂದರು. ಜಿಮಖಾನಾದ ಉಪಾದ್ಯಕ್ಷರಾದ ಪ್ರೊ. ಜೆ.ಟಿ.ಗುಡಗೂರ ಅವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕಾಲೇಜಿನ ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯಾದ್ಯಕ್ಷರಾದ  ಪ್ರೊ. ವಿ. ಬಿ. ಸಾವಿರಮಠ ಅವರು ಸಮಾರಂಭವನ್ನು ಆಯೋಜಿಸಿದ್ದರು. ಪ್ರಾಧ್ಯಾಪಕರಾದ  ಪ್ರೊ.ಮಂಗಳವೇಡೆ, ಪ್ರೊ.ಜ್ಯೋತಿ ದೊಡ್ಡಮನಿ, ಪ್ರೊ.ಕಿರಣ ಕೊಲ್ಕಾರ ಮತ್ತು ಪ್ರೊ.ಗಣಿ ಹಾಗೂ ಅನೇಕ ವಿದ್ಯಾರ್ಥಿಗಳು ಸಮಾರಂಭದಲ್ಲಿ ಹಾಜರಿದ್ದರು.

